50/

## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 388 |
| 2. | ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 18.07.2024 |
| 4. | ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ, ಅಧಿಕಾರಿ/ಸಿಬ್ಬಂದಿಗಳಿಗಾಗಿ ವೃಂದ ಹಾಗೂ ನೇಮಕಾತಿ ನಿಯಮಗಳನ್ನು ರಚಿಸಲಾಗಿದೆಯೇ; ಇವುಗಳ ಪರಿಷ್ಕರಣ ನಿಯಮಗಳೇನು; (ಮಾಹಿತಿ ನೀಡುವುದು) | ರಾಜ್ಯ ಸರ್ಕಾರದ ಅಡಿಯಲ್ಲಿ ಬರುವ ಪ್ರತಿಯೊಂದು ಇಲಾಖೆಗಳಿಗೂ ವೃಂದ ಮತ್ತು ನೇಮಕಾತಿ ನಿಯಮಗಳು ರಚಿತವಾಗಿರುತ್ತವೆ.<br><br>ಸರ್ಕಾರದ ಎಲ್ಲಾ ಇಲಾಖೆಗಳು ತಮ್ಮ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಕನಿಷ್ಠ ಮೂರು ವರ್ಷಗಳಿಗೊಮ್ಮೆ ಪರಿಷ್ಕರಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನಿಡಿ 2004, ದಿನಾಂಕ: 08-10-2004ರಲ್ಲಿ ತಿಳಿಸಲಾಗಿದೆ.<br><br>ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕಾಲಕಾಲಕ್ಕೆ ಎಲ್ಲಾ ಇಲಾಖೆಗಳಿಗೆ ಈ ಕೆಳಕಂಡ ಸರ್ಕಾರದ ಆದೇಶ/ಸುತ್ತೋಲೆಗಳ ಮೂಲಕ ಮಾರ್ಗಸೂಚಿಗಳನ್ನು ನೀಡಲಾಗಿದೆ:<br><br>1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 82 ಸೇನಿಡಿ 2006, ದಿನಾಂಕ: 13-08-2007<br>2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 130 ಸೇನಿಡಿ 2007, ದಿನಾಂಕ: 08-10-2007<br>3. ಸುತ್ತೋಲೆ ಸಂಖ್ಯೆ: ಸಿಆಸುಇ 140 ಸೇನಿಇ 2010, ದಿನಾಂಕ: 07-04-2011<br>4. ಸುತ್ತೋಲೆ ಸಂಖ್ಯೆ: ಸಿಆಸುಇ 66 ಸೇನಿಡಿ 2019, ದಿನಾಂಕ: 25-09-2019<br>5. ಸುತ್ತೋಲೆ ಸಂಖ್ಯೆ: ಸಿಆಸುಇ 17 ಸೇನಿಡಿ 2020, ದಿನಾಂಕ: 06-07-2020 |
| ಆ) | ರಾಜ್ಯದ ಎಲ್ಲಾ ಇಲಾಖೆಗಳ ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ಹೆಚ್.ಆರ್.ಎಂ.ಎಸ್ ಮೂಲಕ ವೇತನ ಪಾವತಿಯಾಗುತ್ತಿದೆಯೇ; ಹೆಚ್.ಆರ್.ಎಂ.ಎಸ್ ರಹಿತವಾಗಿ ಯಾರ್ಯಾರಿಗೆ ವೇತನ/ಸಂಭಾವನೆ ಗೌರವಧನ ಪಾವತಿಯಾಗುತ್ತಿದೆ; ಅದರ ವಾರ್ಷಿಕ ಮೊತ್ತವೆಷ್ಟು; (ವಿವರ ನೀಡುವುದು) | ಸರ್ಕಾರದ ವಿವಿದ ಇಲಾಖೆಗಳಲ್ಲಿ ಹೆಚ್.ಆರ್.ಎಂ.ಎಸ್ ಮೂಲಕ ವೇತನ ಪಾವತಿಯಾಗುತ್ತಿದೆ. ಸರ್ಕಾರಿ ಸಂಸ್ಥೆಗಳು ಕೋರಿಕೆ ಸಲ್ಲಿಸಿದಲ್ಲಿ ಅವುಗಳನ್ನು ಹೆಚ್.ಆರ್.ಎಂ.ಎಸ್ ವ್ಯಾಪ್ತಿಗೆ ಒಳಪಡಿಸಲು ಕ್ರಮ ವಹಿಸಲಾಗುತ್ತಿದೆ. |
| ಇ) | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಲಹೆಗಾರ ಸಂಯೋಜಕರ ಹುದ್ದೆಗಳಲ್ಲಿ ನೇಮಕವಾದ ನಿವೃತ್ತ ಅಧಿಕಾರಿಗಳನ್ನು ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಕೆಲಸದಿಂದ ಬಿಡುಗಡೆಗೊಳಿಸಲಾಗಿದೆಯೇ; ಬಿಡುಗಡೆಗೊಳಿಸದ ದಿನಾಂಕ ಸಹಿತ ಬಿಡುಗಡೆಗೊಳಿಸಿದ ನಿವೃತ್ತರ ಹೆಸರು ಮತ್ತು ರದ್ದುಪಡಿಸಿದ ಎಲ್ಲಾ ಇಲಾಖೆಗಳಲ್ಲಿನ ಹುದ್ದೆಗಳ ವಿವರ ನೀಡುವುದು; | ಸುತ್ತೋಲೆ ಸಂಖ್ಯೆ: ಸಿಆಸುಇ 588 ಸೇನೆನಿ 2015 ದಿನಾಂಕ: 29.02.2016ರಲ್ಲಿ ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡತಕ್ಕದ್ದಲ್ಲವೆಂದು ಮತ್ತು ನಿವೃತ್ತರಾಗಿ ಪುನರ್ ನೇಮಕದ ಆಧಾರದ ಮೇಲೆ ಮುಂದುವರೆಯುತ್ತಿರುವ ನೌಕರರು/ಅಧಿಕಾರಿಗಳ ಸೇವೆಯು ಅವಶ್ಯವಾಗಿದೆಯೇ ಎಂಬುದನ್ನು ಪರಿಶೀಲಿಸಿ ಸೇವೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ಮುಕ್ತಾಯಗೊಳಿಸಿ ರಿಕ್ತ ಸ್ಥಾನಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ತುಂಬುವ ಬಗ್ಗೆ ಪರಿಶೀಲಿಸಬೇಕೆಂದು ಸೂಚಿಸಲಾಗಿದೆ.<br>ದಿನಾಂಕ: 02.0.3.2016ರ ಇದೇ ಸಮಸಂಖ್ಯೆಯ |

| | | |
|---|---|---|
| | | ಸುತ್ತೋಲೆಯಲ್ಲಿ ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977ರನ್ವಯ ಸಚಿವ ಸಂಪುಟದ ಅನುಮೋದನೆ ಪಡೆದು ಪುನರ್ ನೇಮಕಗೊಂಡ ಮತ್ತು ಸಚಿವರ ಆಪ್ತ ಶಾಖೆಯಲ್ಲಿ ನೇಮಕಗೊಂಡ ಅಧಿಕಾರಿ ನೌಕರರ ಪ್ರಕರಣಗಳಿಗೆ ಅನ್ವಯಿಸುವುದಿಲ್ಲವೆಂದು ಸೂಚಿಸಲಾಗಿದೆ. |
| ಈ) | ನಾಗರಿಕ ಸೇವಾ ನಿಯಮಗಳನ್ವಯ ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗಿರುವ ಸವಲತ್ತುಗಳಾವುವು; ಅಧಿಕಾರಿಗಳು ಕಾರ್ಯನಿರ್ವಹಿಸುವ ಸ್ಥಳದ ಮನೆ ಬಾಡಿಗೆ ಭತ್ಯೆ, ಪ್ರಭಾರ ಭತ್ಯೆ, ಪ್ರಯಾಣ ಭತ್ಯೆ ಇವುಗಳನ್ನು ಚಾಲ್ತಿಯಲ್ಲಿರುವ ನಿಯಮಗಳಾನುಸಾರ ಕ್ಷಿಪ್ರ ಸಮಯದಲ್ಲಿ ಮಂಜೂರು ಮಾಡಲು ಕೈಗೊಂಡಿರುವ ಕ್ರಮಗಳೇನು; ಜ್ಯೋತಿ ಸಂಜೀವಿನಿ ಯೋಜನೆಯಡಿ ಅಭಿವೃದ್ಧಿಪಡಿಸಲಾದ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಂಡ ಸರ್ಕಾರಿ ನೌಕರರೆಷ್ಟು ಮತ್ತು ಬಾಕಿಯೆಷ್ಟು; ಬಾಕಿಗೆ ಕಾರಣವೇನು; (ವಿವರ ಒದಗಿಸುವುದು) | ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1957 ರ ಪ್ರಕಾರ ಸರ್ಕಾರಿ ಅಧಿಕಾರಿ/ ಸಿಬ್ಬಂದಿಗಳಿಗೆ ಈ ಕೆಳಕಂಡ ಸವಲತ್ತುಗಳನ್ನು ನೀಡಲಾಗಿರುತ್ತದೆ:-<br>1. ವೇತನ<br>2. ಮನೆ ಬಾಡಿಗೆ ಭತ್ಯೆ<br>3. ಪ್ರಭಾರ ಭತ್ಯೆ ಹಾಗೂ ಇತರ ಭತ್ಯೆಗಳು<br>4. ಗಳಿಕೆ ರಜೆ ನಗದೀಕರಣ ಸೌಲಭ್ಯ<br>5. ರಜೆ ಪ್ರಯಾಣ ರಿಯಾಯಿತಿ ಸೌಲಭ್ಯ<br>6. ಸ್ವಗ್ರಾಮ ಪ್ರಯಾಣ ರಿಯಾಯಿತಿ ಸೌಲಭ್ಯ<br>7. ರಜೆ ಸೌಲಭ್ಯಗಳು (ಸಾಂದರ್ಭಿಕ ರಜೆ, ನಿರ್ಬಧಿತ ರಜೆ, ಗಳಿಕೆ ರಜೆ, ಪರಿವರ್ತಿತ ರಜೆ, ಶಿಶುಪಾಲನಾ ರಜೆ, ಪ್ರಸೂತಿ ರಜೆ, ಪಿತೃತ್ವ ರಜೆ, ಇತ್ಯಾದಿ.)<br><br>ವೇತನ ಪರಿಷ್ಕರಣೆಯ ಸಂದರ್ಭದಲ್ಲಿ ಮೇಲ್ಕಂಡ ಸೌಲಭ್ಯಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ಕಾಲ ಕಾಲಕ್ಕೆ ಅನ್ವಯವಾಗುವಂತೆ ಆದೇಶಗಳನ್ನು ಹೊರಡಿಸಲಾಗುತ್ತಿದೆ.<br><br>ಅಧಿಕಾರಿಗಳು ಕಾರ್ಯನಿರ್ವಹಿಸುವ ಸ್ಥಳದ ಮನೆ ಬಾಡಿಗೆ ಭತ್ಯೆ, ಪ್ರಭಾರ ಭತ್ಯೆ, ಪ್ರಯಾಣ ಭತ್ಯೆ ಇವುಗಳನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1957ರಲ್ಲಿನ ಹಾಗೂ ಈ ಸಂಬಂಧ ಕಾಲ ಕಾಲಕ್ಕೆ ಹೊರಡಿಸುವ ನಿಯಮಗಳಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಪರಿಶೀಲಿಸಿ ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಜ್ಯೋತಿ ಸಂಜೀವಿನಿ ಯೋಜನೆಯಡಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿಗಳು 1963ರ ನಿಯಮ 2ರನ್ವಯ ಕುಟುಂಬ ಪದದ ಅರ್ಥ ವ್ಯಾಪ್ತಿಯಲ್ಲಿ ಬರುವ ನೌಕರರು ಹಾಗೂ ಅವಲಂಬಿತ ಸದಸ್ಯರ ನೋಂದಾವಣೆಯನ್ನು ಪ್ರತ್ಯೇಕವಾಗಿ ಮಾಡಿರುವುದಿಲ್ಲ. ಹೆಚ್.ಆರ್.ಎಂ.ಎಸ್ ನಲ್ಲಿ ಲಭ್ಯವಿರುವ ಫಲಾನುಭವಿಗಳ ದತ್ತಾಂಶವನ್ನು ಎಪಿಐ ಮೂಲಕ ಜ್ಯೋತಿ ಸಂಜೀವಿನಿ ದತ್ತಾಂಶಕ್ಕೆ ಐಕೀಕರಿಸಲಾಗಿರುತ್ತದೆ.<br><br>ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನಿಂದ ಈಗಾಗಲೇ ಅಭಿವೃದ್ಧಿಪಡಿಸಲಾದ ತಂತ್ರಾಂಶದಲ್ಲಿ ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಯೋಜನೆಯ ತಂತ್ರಾಂಶದಲ್ಲಿ ಲೋಪ ದೋಷಗಳು ಕಂಡು ಬಂದಿರುವುದಿಲ್ಲ. |
| ಉ) | ಸರ್ಕಾರಿ ನೌಕರರ ವೇತನದಿಂದ ಪ್ರತಿ ತಿಂಗಳು ಕಟಾವಣೆಯಾಗುವ ಎನ್‌ಪಿಎಸ್/ಜಿಪಿಎಫ್/ಕೆಜಿಐಡಿ/ಎಲ್‌ಐಸಿ ಮುಂತಾದವುಗಳ ಮೊತ್ತವು ಸಂಬಂಧಿಸಿದ ಉಪ ಶೀರ್ಷಿಕೆಗಳಿಗೆ ಕ್ಷಿಪ್ರವಾಗಿ ಜಮೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲಾಗಿದೆಯೇ; (ವಿವರ ನೀಡುವುದು) | ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

| | | |
|---|---|---|
| ಊ) | ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಿಸಿದ ವಿವಿಧ ಬಡ್ತಿಗಳು ವಾರ್ಷಿಕ ಕಾರ್ಯ ನಿರ್ವಹಣಾ ವರದಿ ಮತ್ತು ಇಲಾಖಾ ವಿಚಾರಣೆ ಮುಂತಾದ ಸೇವಾ ವಿಷಯಗಳನ್ನು ಸಕಾಲ ಕಾಯ್ದೆಯಡಿಯಲ್ಲಿ ತರಲಾಗಿದೆಯೇ? | ದಿನಾಂಕ:26.09.2025ರನ್ವಯ ಸಕಾಲ ಕಾಯ್ದೆಯಡಿ ಶಾಲಾ ಶಿಕ್ಷಣ ಇಲಾಖೆ-20, ಸರ್ಕಾರಿ ಕೇಂದ್ರ ಮುದ್ರಣಾಲಯ -20, ಸರ್ಕಾರಿ ವಿಮಾ ಇಲಾಖೆ-47, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ-20, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ-12, ಲೋಕೋಪಯೋಗಿ ಇಲಾಖೆ-27. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ/ ಕೆಶಿಫ್ ವಿಭಾಗಗಳು/ ಉಪವಿಭಾಗಗಳು-44, ಅರಣ್ಯ ಇಲಾಖೆ-21, ಸಿಆಸುಇ -21, ಜಲಸಂಪನ್ಮೂಲ ಇಲಾಖೆ-27, ಕಾಲೇಜು ಶಿಕ್ಷಣ ಇಲಾಖೆ-10, ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ-4 ಸೇವೆಗಳನ್ನು ಅಧಿಸೂಚಿಸಲಾಗಿದೆ.<br><br>ವಿವಿದ ಇಲಾಖೆಗಳಡಿ ಒಟ್ಟಾರೆ 309 ಸಿಬ್ಬಂದಿ ಸೇವೆಗಳನ್ನು ಸಕಾಲ ಕಾಯ್ದೆಯಡಿ ಅಧಿಸೂಚಿಸಲಾಗಿದೆ. |

**ಸಂಖ್ಯೆ: ಸಿಆಸುಇ 177 ಸೇನಿಡಿ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ